ಮುದ್ರಕನಾಗಿದ್ದು ಪ್ಲಸ್ ಪಾಯಿಂಟ್ ಆಗಿತ್ತು. ಶೇಷನಾರಾಯಣರ ಮುದ್ರಣಾಲಯದಲ್ಲಿ ಪುಸ್ತಕ ಅಚ್ಚಾದರೆ ತಪ್ಪುಗಳು ಇರುವುದಿಲ್ಲ ಎಂಬ ಜನಪ್ರಿಯತೆ ಬಂತು. ಶ್ರೇಷ್ಠ ಕೃತಿಗಳಾದ 'ಕಾನೂರು ಹೆಗ್ಗಡಿತಿ', ತೀ.ನಂ.ಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ' ಶೇಷನಾರಾಯಣರ ನೇತೃತ್ವದಲ್ಲೇ ಪ್ರಕಟವಾದವು. ವಿ.ಸೀ., ರಾಜರತ್ನಂ, ಮಾಸ್ತಿಯಂತಹ ದೊಡ್ಡವರು ಶೇಷನಾರಾಯಣರ ಅಚ್ಚಿನ ಕೆಲಸವನ್ನು ಮೆಚ್ಚಿಕೊಂಡರು.

ಸಾಹಿತ್ಯ ಮತ್ತು ಮುದ್ರಣ ಶೇಷನಾರಾಯಣರ ಎರಡು ಕಣ್ಣುಗಳಾಗಿದ್ದರೆ ಮೂರನೆಯ ಕಣ್ಣು ಅವರ ಸಾಹಿತ್ಯ ಪರಿಚಾರಿಕೆ. ಲೇಖಕರಿಂದ, ಪ್ರಕಾಶಕರಿಂದ ಪುಸ್ತಕಗಳನ್ನು ಊರೂರಿಗೆ ತೆಗೆದುಕೊಂಡು ಮಾರಾಟಮಾಡಿ ಬಂದ ಹಣವನ್ನು ತಲುಪಿಸುತ್ತಿದ್ದರು. ಲೇಖಕ, ಮುದ್ರಕ, ಅನುವಾದಕ, ಪರಿಚಾರಕ, ಸಂಶೋಧಕ –ಹೀಗೆ ಹಲವು ಬಗೆಯ ಜವಾಬ್ದಾರಿ ಹೊತ್ತ ಶೇಷನಾರಾಯಣ ಸಾಹಿತ್ಯ ಸಂಬಂಧಿ ಚಟುವಟಿಕೆಗಳ ಕೇಂದ್ರವಾಗಿದ್ದರು.

> ಕತೆ, ಕಾದಂಬರಿಗಳಿಂತ ಕೌತುಕವಾದದ್ದು ಶೇಷನಾರಾಯಣರ ಬದುಕು. ಆದೊಂದು ನಿರಂತರ ಹೋರಾಟ. ತಮ್ಮ ಸಾಧನೆಗೆ ಬೆನ್ನಲುಬಾಗಿ ನಿಂತ ಪತ್ನಿ ಸುಭದ್ರ, ಭಾವಮೈದುನರನ್ನು ಕೊಂಡಾಡುತ್ತಾರೆ.

## ಸಣ್ಣ ಕತೆಗಳು

ಹದಿನೆಂಟು ಕಾದಂಬರಿಗಳನ್ನು ಬರೆದಿದ್ದರೂ, ಶೇಷನಾರಾಯಣರೆಂದಾಗ ಅವರ ಸಣ್ಣಕತೆಗಳು ಕಣ್ಮುಂದೆ ಬರುತ್ತವೆ. ಅದಕ್ಕೆ ಮುಖ್ಯ ಕಾರಣ ಅವರ ವಿಧ ವಿಧವಾದ ಪ್ರಯೋಗಗಳು. 'ಮೊಲ್ಲೆ–ಮಲ್ಲಿಗೆ' ಬೆಂಗಳೂರು ವಿಶ್ವವಿದ್ಯಾಲಯದ ಪಿ.ಯು.ಸಿ. ತರಗತಿಗೆ ಪಠ್ಯವಾಗಿತ್ತು. ಈ ಪುಸ್ತಕದಲ್ಲಿ ಹೂಗಳ ಮಧ್ಯೆ ನಡೆಯುವ ಸಂವಾದ ಅವಿಸ್ಮರಣೀಯ. ಹೂವು ಹುಟ್ಟುವುದು, ಅರಳುವುದನ್ನು ವರ್ಣಿಸಿರುವ ಬಗೆಯನ್ನು ನೋಡಿದರೆ ಅವರೊಬ್ಬ ಕವಿಯೂ ಆಗಬಹುದಿತ್ತು ಎಂದು ಅನ್ನಿಸದೆ ಇರುವುದಿಲ್ಲ. ಮೂರಡಿಯ 'ನಾಗದಾಳಿ' ಪರಿಚಯ ಅಮೋಘವಾಗಿದೆ. 'ಬಾಲ ಮುರಳಿ' ಎಂಬ ಮಕ್ಕಳ ಪುಸ್ತಕದಲ್ಲಿ ಕರು–ಹಸು ಸಂಬಂಧವನ್ನು ಅಚ್ಚುಕಟ್ಟಾಗಿ ವರ್ಣಿಸಿದ್ದಾರೆ. ಕಾಡಿನ ಪರಿಸರದಲ್ಲೇ ಬೆಳೆದ ಶೇಷನಾರಾಯಣರಿಂದ ಪ್ರಾಣಿಪಕ್ಷಿಗಳ, ಮರಗಿಡಗಳ ವಿವರಣೆ, ಅವುಗಳ ಮಹತ್ವ ಹಾಗೂ ಮಾಹಿತಿ ಪೂರ್ತಿಯಾಗಿ ಮೂಡಿ ಬಂದಿರುವುದು ಸಹಜವೇ ಆಗಿದೆ.

## ಕಾವೇರಿ- ಒಂದು ಚಿಮ್ಮು ಒಂದು ಹೊರಳು

ತಲಕಾವೇರಿಯಲ್ಲಿ ಹುಟ್ಟಿ ಉಪನದಿಗಳಿಂದ ಶ್ರೀಮಂತವಾಗಿ ತಮಿಳುನಾಡಿನಲ್ಲಿ ಮೈದುಂಬಿ ಹರಿಯುವ ಕಾವೇರಿ ನದಿಯ ಬಗ್ಗೆ ವಿಶೇಷ ಆಕರ್ಷಣೆ ಸಹಜವಾಗಿಯೇ ಶೇಷನಾರಾಯಣರಿಗೆ ಮೊದಲಿನಿಂದಲೂ ಇತ್ತು. ಅವರ 'ಕಾವೇರಿ– ಒಂದು ಚಿಮ್ಮು ಒಂದು ಹೊರಳು' ಪುಸ್ತಕ ಒಂದು ಸಾಹಿತ್ಯ ಕೃತಿಯಾಗಿರದೆ ಒಂದು ಸಂಶೋಧನಾ ಗ್ರಂಥವಾಗಿದೆ. ಅದು ಕರ್ನಾಟಕ ಹಾಗೂ ತಮಿಳುನಾಡಿನ ನೀರಾವರಿ ಅಧಿಕಾರಿಗಳಿಗೆ, ಕಾವೇರಿ ನದಿ ನೀರಿನ ಹಂಚಿಕೆಯ ಹೊಣೆ ಹೊತ್ತವರಿಗೂ ದಾರಿದೀಪವಾಗಿರುವ ಗ್ರಂಥ. ಪ್ರತಿಯೊಬ್ಬ ಕನ್ನಡಿಗ ಹಾಗೂ ತಮಿಳುನಾಡಿನ ಪ್ರಜೆ ಓದಬೇಕಾದ ಕೃತಿ. ಈ ಕೃತಿ ರಚಿಸಿದ್ದಕ್ಕಾಗಿ ಮಂಡ್ಯದ ರೈತರು ಕೆ.ಎಸ್. ಪುಟ್ಟಣ್ಣಯ್ಯನವರ